# ಕರ್ನಾಟಕ ವಿಧಾನ ಪರಿಷತ್ತು

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2063
2) ಸದಸ್ಯರ ಹೆಸರು : ಶ್ರೀ ಪಿ.ಹೆಚ್.ಪೂಜಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ)
3) ಉತ್ತರಿಸಬೇಕಾದ ದಿನಾಂಕ : 25-03-2026
4) ಉತ್ತರಿಸಬೇಕಾದ ಸಚಿವರು : ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು

| | ಪ್ರಶ್ನೆ | ಉತ್ತರ |
|---|---|---|
| ಅ) | ಆಲಮಟ್ಟಿ ಜಲಾಶಯದ ಹಿನ್ನೀರಿನಲ್ಲಿ ಆಂಧ್ರ ಪ್ರದೇಶ ಮತ್ತು ಹೊಸಪೇಟೆಯ ಮೀನುಗಾರರು ತಾವುಗಳು ಸ್ಥಳೀಯವಾಗಿ ವಾಸಿಸುತ್ತಿದ್ದೇವೆಂದು ಸಕ್ಷಮ ಪ್ರಾಧಿಕಾರ ಗಳಿಂದ ವಾಸಸ್ಥಳದ ಖೊಟ್ಟಿ ದಾಖಲೆ ಗಳನ್ನು ಪಡೆದುಕೊಂಡು ಅಕ್ರಮವಾಗಿ ಮೀನುಗಾರಿಕೆ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, | ಆಲಮಟ್ಟಿ ಜಲಾಶಯದ ಹಿನ್ನೀರಿನಲ್ಲಿ ಆಂಧ್ರ ಪ್ರದೇಶ ಮತ್ತು ಹೊಸಪೇಟೆಯ ಮೀನುಗಾರರು ತಾವುಗಳು ಸ್ಥಳೀಯವಾಗಿ ವಾಸಿಸುತ್ತಿದ್ದೇವೆಂದು ಸಕ್ಷಮ ಪ್ರಾಧಿಕಾರ ಗಳಿಂದ ವಾಸಸ್ಥಳದ ಖೊಟ್ಟಿ ದಾಖಲೆ ಗಳನ್ನು ಪಡೆದುಕೊಂಡು ಅಕ್ರಮವಾಗಿ ಮೀನುಗಾರಿಕೆ ಮಾಡುತ್ತಿರುವ ಕುರಿತು ದೂರುಗಳು ಸ್ವೀಕೃತವಾಗಿರುತ್ತವೆ.<br>ಮೀನುಗಾರಿಕೆ ಇಲಾಖೆಯಿಂದ ಮೀನು ಹಿಡಿಯಲು ಪರವಾನಿಗೆ ನೀಡುವ ಪೂರ್ವದಲ್ಲಿ ಫಲಾನುಭವಿಗಳು ಸಲ್ಲಿಸುವ ವಾಸದ ದೃಢೀಕರಣ ಪತ್ರ, ಆಧಾರ್ ಕಾರ್ಡ್, ಗುರುತಿನ ಚೀಟಿಗಳನ್ನು ಪರಿಶೀಲಿಸಿಕೊಂಡು ಪರವಾನಗಿ ನೀಡಲಾಗುತ್ತಿದೆ. |
| ಆ) | ಬಂದಿದ್ದರೆ, ಈ ನಿಟ್ಟಿನಲ್ಲಿ ಅಕ್ರಮವಾಗಿ ಮೀನುಗಾರಿಕೆ ತಡೆಗಟ್ಟಲು ಕೈಗೊಂಡಿರುವ ಕ್ರಮಗಳೇನು; ಅಕ್ರಮವಾಗಿ / ಕಾನೂನು ಬಾಹಿರವಾಗಿ ದಾಖಲೆಗಳನ್ನು ನೀಡುತ್ತಿರುವ ಅಧಿಕಾರಿಗಳ ಮೇಲೆ ಕೈಗೊಂಡಿರುವ ಕ್ರಮಗಳೇನು; | ಅನ್ವಯಿಸುವುದಿಲ್ಲ. |
| ಇ) | ಸದರಿ ಪ್ರದೇಶದಲ್ಲಿ ಮೀನುಗಾರಿಕೆ ಇಂದ ಕೋಟ್ಯಾಂತರ ರೂಪಾಯಿ ವ್ಯವಹಾರ ನಡೆದಿದ್ದು, ಕಡಿಮೆ ರಾಯಧನ ಸಂಗ್ರಹವಾಗುತ್ತಿದೆ ಎಂಬ ಅಂಶ ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದರೆ, ರಾಯಧನ ಸಂಗ್ರಹ ಹೆಚ್ಚಳವಾಗಲು ಪ್ರತಿ ಕೆಜಿ ಆಧಾರದ ಮೇಲೆ ರಾಯಧನ ನಿಗದಿ ಮಾಡುವಂತೆ ಸರ್ಕಾರವು ಕಾನೂನು ಜಾರಿಗೆ ತರುವುದೇ; ತರುವುದಾದರೇ ಯಾವ ಕಾಲಮಿತಿಯಲ್ಲಿ ತರಲಾಗುವುದು; | ಮೀನುಗಾರಿಕೆ ಇಲಾಖೆಯಿಂದ ರಾಯಧನ ಸಂಗ್ರಹ ಮಾಡುತ್ತಿರುವುದಿಲ್ಲ.<br>ಸದರಿ ಪ್ರದೇಶದಲ್ಲಿ ಜಲಾಶಯ / ನದಿ ಭಾಗಗಳಲ್ಲಿ ಒಳನಾಡು ಮೀನುಗಾರಿಕೆ ಕಾರ್ಯನೀತಿ-2014ರ ಪ್ರಕಾರ ವೃತ್ತಿಪರ ಮೀನುಗಾರರಿಗೆ ಅಥವಾ ಕ್ರೀಡಾ ಮೀನುಗಾರರಿಗೆ ನಿರ್ದಿಷ್ಟ ಮೊತ್ತವನ್ನು ನಿಗದಿಪಡಿಸಿ, ನಿಗಧಿತ ಜಲಸಂಪನ್ಮೂಲದಲ್ಲಿ ವಾರ್ಷಿಕ ಪರವಾನಿಗೆ ಗಳನ್ನು ನೀಡುವ ಮೂಲಕ ಮೀನು ಹಿಡಿಯಲು ಅವಕಾಶ ನೀಡಲಾಗುತ್ತಿದೆ. ಇದರಲ್ಲಿ ಪರವಾನಗಿ ಮೂಲಕ ಹರಿಗೋಲು ಬಳಸಿ ಇಬ್ಬರು ಮೀನುಗಾರರು ಸೇರಿ ಮೀನು ಶಿಕಾರಿ ಮಾಡಲು ರೂ. 3000/- ಗಳನ್ನು ಹಾಗೂ ಒಬ್ಬರಿಗೆ ರೂ.500/-ಗಳಂತೆ ಪರವಾನಿಗೆ ಶುಲ್ಕಗಳನ್ನು ನಿಗಧಿಪಡಿಸಲಾಗಿದೆ. ರಾಯಧನ ಸಂಗ್ರಹ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿರುವುದಿಲ್ಲ. |

| | | |
|---|---|---|
| ಈ | ಸದರಿ ಪ್ರದೇಶದಲ್ಲಿ 2023-24 ರಿಂದ 2025-2026ನೇ ಸಾಲಿಗೆ ಸದರಿ ಪ್ರದೇಶದಲ್ಲಿನ ಮೀನುಗಾರಿಕೆಯಿಂದ ಸಂಗ್ರಹವಾಗಿರುವ ರಾಯಧನ ಎಷ್ಟು? (ವರ್ಷವಾರು ಪ್ರತ್ಯೇಕವಾಗಿ ವಿವರ ನೀಡುವುದು) | ಆಲಮಟ್ಟಿ ಜಲಾಶಯಕ್ಕೆ ಮೀನುಗಾರಿಕೆ ಇಲಾಖೆಯಿಂದ ಸ್ಥಳೀಯ ಮೀನುಗಾರರಿಗೆ ಪರವಾನಿಗೆ ನೀಡಲಾಗುತ್ತಿದ್ದು, ಇದರಿಂದ ಬಂದಿರುವ ಆದಾಯದ ವಿವರ ಈ ಕೆಳಕಂಡಂತೆ ಇರುತ್ತದೆ. |

| ವರ್ಷ | 2023-24 | 2024-25 | 2025-26 |
|---|---|---|---|
| ಆದಾಯ | 15.87 ಲಕ್ಷ | 10.86 ಲಕ್ಷ | 16.05 ಲಕ್ಷ |

ಸಂಖ್ಯೆ: ಪಸಂಮೀ ಇ-103 ಮೀಇಯೋ 2026

(ಮಂಕಾಳ ಎಸ್. ವೈದ್ಯ)
ಮೀನುಗಾರಿಕೆ, ಬಂದರು ಮತ್ತು
ಒಳನಾಡು ಜಲಸಾರಿಗೆ ಸಚಿವರು